೧೪) ಸಂಡೂರು ಜನರಲ್ ಆಸ್ಪತ್ರೆಗೆ ಎಕ್ಸರೇ ತಂತ್ರಜ್ಞರನ್ನು ನೇಮಿಸುವುದು ಮತ್ತು ಕ್ಷಕಿರಣ ಯಂತ್ರವನ್ನು ರಿಪೇರಿ ಮಾಡಿಸುವುದರ ಬಗ್ಗೆ

ಶ್ರೀ ಯು. ಭೂಪತಿ (ಸಂಡೂರು).— ಸಂಡೂರಿನ ಜನರಲ್ ಆಸ್ಪತ್ರೆಯಲ್ಲಿ ಒಂದು ಕ್ಷಕಿರಣ ಯಂತ್ರವಿದ್ದು ಇಲ್ಲಿಯವರೆಗೆ ಅದನ್ನು ಉಪಯೋಗಿಸಿಲ್ಲವೆಂದು ತಿಳಿದುಬಂದಿದೆ. ಸಂಡೂರಿನ ಜನರು ಎಕ್ಸರೇ ಫೋಟೋಗ್ರಾಫ್ ಮಾಡಿಸಬೇಕಾದಲ್ಲಿ ಕನಿಷ್ಟ ೩೦ ಕಿ. ಮೀ. ದೂರ ಹೋಗಿ ಬರಬೇಕಾಗಿದೆ. ಅಲ್ಲದೇ ಎಕ್ಸರೇ ತಂತ್ರಜ್ಞರೊಬ್ಬರನ್ನು ನೇಮಕಮಾಡಲು ಜೂನ್ ತಿಂಗಳಲ್ಲಿ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೆ. ನನ್ನ ಮನವಿ ಇನ್ನೂ ಕೂಡ ಕಾರ್ಯಗತಗೊಂಡಿಲ್ಲ ಸಾರ್ವಜನಿಕ ಹಿತದೃಷ್ಟಿಯಿಂದ ಒಬ್ಬ ಎಕ್ಸರೇ ತಂತ್ರಜ್ಞರನ್ನು ತಕ್ಷಣ ಸಂಡೂರಿಗೆ ನೇಮಿಸಲು ಹಾಗೂ ಯಂತ್ರವನ್ನು ದುರಸ್ತಿ ಮಾಡಿಸಲು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ರಾಚಯ್ಯ.— ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಸಂಬಂಧಿಸಿದ ಇಂಜಿನಿಯರುಗಳು ಆಸ್ಪತ್ರೆಗೆ ಹೋಗಿ ನೋಡಿಕೊಂಡು ಬಂದಿದ್ದಾರೆ. ರಿಪೇರಿ ಮಾಡಿಸಬೇಕು, ಅದನ್ನು ಮಾಡಿಸುತ್ತೇನೆ ಹೊಸದಾಗಿ ಬಂದಿದೆ, ಕ್ಷ-ಕಿರಣ ತಂತ್ರಜ್ಞರನ್ನು ನೇಮಕ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

೧೫) ಹುಣಸಾಳ ಕ್ಷೇತ್ರದಲ್ಲಿ ಘಟಪ್ರಭಾ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಿಸುವುದರ ಬಗ್ಗೆ

ಶ್ರೀ ಆರ್. ಎಂ. ಪಾಟೀಲ (ಅರಭಾವಿ).— ಸನ್ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರವಾದ ಹುಣಸ್ಯಾಳ ದಲ್ಲಿ ೧೯೭೫ ರಲ್ಲಿ ಡಿ. ಪಿ. ಎ. ಪಿ. ಯೋಜನೆಯಡಿಯಲ್ಲಿ ಘಟಪ್ರಭಾ ನದಿಗೆ ಅಡ್ಡಲಾಗಿ, ಖ್ಯಾರೇಜೊಂದನ್ನು ನಿರ್ಮಾಣ ಮಾಡುವ ಕಾರ್ಯ ಆರಂಭವಾಯಿತು. ಈ ಯೋಜನೆ ಪೂರ್ತಿಗೊಂಡಾಗ, ಸುಮಾರು ೬೨೦ ಎಕರೆಗೆ ೧೨ ತಿಂಗಳ ಕಾಲವೂ ನೀರು ಸಿಗುತ್ತದೆ. ಆರಂಭದಲ್ಲಿ ಕೆಲಸ ತೀವ್ರಗತಿಯಲ್ಲಿ ಆರಂಭವಾಗಿ ಇದು ಈಗ ಸ್ಥಗಿತಗೊಂಡಿದೆ. ಅರ್ಧಕ್ಕೆ ನಿಂತಿರುವ ಈ ಕೆಲಸ ಪೂರ್ತಿಯಾದಲ್ಲಿ ಬರಗಾಲಕ್ಕೆ ಮೇಲಿಂದ ತುತ್ತಾಗುವ ಈ ಭಾಗದ ಜನರಿಗೆ ಶಾಶ್ವತ ಅನುಕೂಲವಾಗುವುದಲ್ಲದೆ, ಮಹಾಲಿಂಗಪುರ, ಕುಲಗೋಡ, ಗ್ರಾಮಗಳಿಗೆ ಸಂಪರ್ಕವೂ ಒದಗುವುದು. ಇನ್ನು ಕೇವಲ ೬ ಲಕ್ಷದಷ್ಟು ಹಣ ಖರ್ಚು ಮಾಡಿದರೆ ಈ ಬ್ಯಾರೇಜ್ ಕೆಲಸ ಪೂರ್ತಿಗೊಳ್ಳುವುದು. ಕಾರಣ ಬಾಕಿ ಉಳಿದಿರುವ ಕೆಲಸಕ್ಕಾಗಿ ಹಣ ಮಂಜೂರಾಗಿದೆ ಯೋಜನೆಯನ್ನು ಪೂರ್ತಿಗೊಳಿಸಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ.— ಸನ್ಮಾನ್ಯ ಅಧ್ಯಕ್ಷರೇ, ಇದನ್ನು ಮಾನ್ಯ ಸಚಿವರ ಗಮನಕ್ಕೆ ತಂದರೆ ಉತ್ತರ ತರಿಸಿಕೊಡಲಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈಗ ಇದ್ದಾರು ಅದರೂ ಈ ಪ್ರಶ್ನೆ ಬಗ್ಗೆ ಉತ್ತರ ಬೇರೆ ಮಂತ್ರಿಗಳು ಹೇಳುತ್ತಾರೆ. ಅವರು ಉತ್ತರ ಕಳುಹಿಸಿದ್ದರೆ, ಅದನ್ನು ಬೇರೆ ಯಾವುದೇ ಸಚಿವರಾದರೂ ಓದಬಹುದು...

ಅಧ್ಯಕ್ಷರು.— ತಾವು ಕುಳಿತುಕೊಳ್ಳಿ, ಸಾಕಷ್ಟು ಉತ್ತರ ಕೊಟ್ಟಿದ್ದಾರೆ, ಕೊಡುತ್ತಿದ್ದಾರೆ. ಇವತ್ತು ೩೫ ಪ್ರಶ್ನೆಗಳು ಈ ನಿಯಮದಲ್ಲಿವೆ. ನಾವು ಬ್ಯಾಲೆಟ್ ಮಾಡಿದ್ದರೆ ೫-೬ಕ್ಕೆ ಮಾತ್ರ ಅವಕಾಶ ಸಿಗುತ್ತಿತ್ತು ಆದರೆ ಸದಸ್ಯರಿಗೆಲ್ಲರಿಗೂ ಅವಕಾಶ ಮಾಡಿಕೊಡಬೇಕೆಂದು ನಾನು ಈ ರೀತಿ ಮಾಡಿದ್ದೇನೆ ..

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೇ, ಮಂತ್ರಿಗಳು ಇದನ್ನು ಬಹಳ ಲಘುವಾಗಿ ತೆಗೆದುಕೊಳ್ಳುತ್ತಿದ್ದಾರೆ. ಸದನದ ಗಮನಕ್ಕೆ ಬಂದಮೇಲೆ ಕೊನೆಯಪಕ್ಷ ಲಿಖಿತ ಉತ್ತರವನ್ನಾದರೂ ಕೊಡಬೇಕು...

ಅಧ್ಯಕ್ಷರು. — ಇವತ್ತೇ ಕೊಡಬೇಕೆಂದು ರೂಲ್ಸ್‌ನಲ್ಲಿ ಇಲ್ಲ, ನಾಳೆ ಕೊಡಬಹುದು, ಉತ್ತರ ತರಿಸಿಕೊಡಬಹುದು...